ಪಿರಿಯಾಪಟ್ಟಣ ತಾಲ್ಲೂಕಿನ ಮಾಕೋಡು-ಎಂ.ಶೆಟ್ಟಿಹಳ್ಳಿ ರಸ್ತೆ ಕಾಮಗಾರಿ

ಚುಕ್ಕೆ ರಹಿತ ಪ್ರಶ್ನೆ: 1077(154)

ಸದಸ್ಯರ ಹೆಸರು: ಶ್ರೀ ಬಸವರಾಜ್ ಹೆಚ್.ಸಿ(ಪಿರಿಯಾಪಟ್ಟಣ)

ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಸಚಿವರು)

ಪ್ರಶ್ನೆ

1. ಪಿರಿಯಾಪಟ್ಟಣ ತಾಲ್ಲೂಕು ಮಾಕೋಡು ಎಂ.ಶೆಟ್ಟಿಹಳ್ಳಿ ರಸ್ತೆ ಕಾಮಗಾರಿ ಪ್ರಧಾನ ಮಂತ್ರಿ ಗ್ರಾಮೋದ್ಯೋಗ ಸಡಕ್ ಯೋಜನೆಯಲ್ಲಿ ಆಯ್ಕೆಯಾಗಿದ್ದು, ಈ ರಸ್ತೆ ಡಾಂಬರೀಕರಣ ಕಾರ್ಯವನ್ನು ಯಾವ ಗುತ್ತಿಗೆದಾರರಿಗೆ ವಹಿಸಲಾಗಿದೆ?

2. ಈ ಕಾಮಗಾರಿಗೆ ನಿಗದಿ ಪಡಿಸಿರುವ ಅನುದಾನ ಎಷ್ಟು?

3. ರಸ್ತೆ ಕಾಮಗಾರಿಯು ಕಳಪೆಯಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4. ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಉತ್ತರ

1. ಕರ್ನಾಟಕ ಭೂಸೇನಾ ನಿಗಮಕ್ಕೆ ಮಾಕೋಡು-ಎಂ.ಶೆಟ್ಟಿಹಳ್ಳಿ ರಸ್ತೆ ಅಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸಲು ವಹಿಸಲಾಗಿದೆ.

2. ರೂ. 34.27 ಲಕ್ಷಗಳು

3. ಬಂದಿರುವುದಿಲ್ಲ

4. ಉದ್ಭವಿಸುವುದಿಲ್ಲ

ರಾಜ್ಯದ ತಾಲ್ಲೂಕು ಪಂಚಾಯತಿಯಲ್ಲಿ ಸಿಬ್ಬಂದಿ ಕೊರತೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1078(155)

ಸದಸ್ಯರ ಹೆಸರು: ಶ್ರೀ ಹೆಚ್.ಸಿ.ಬಸವರಾಜು(ಪಿರಿಯಾಪಟ್ಟಣ)

ಉತ್ತರಿಸುವವರು: ಶ್ರೀ ಎಂ.ವೈ.ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿರುವ ತಾಲ್ಲೂಕು ಪಂಚಾಯತ್ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಸಿಬ್ಬಂದಿಗಳ ಕೊರತೆ ಇರುವ ತಾಲ್ಲೂಕು ಪಂಚಾಯಿತಿ ಕಛೇರಿಗಳಿಗೆ ಅಗತ್ಯ ಸಿಬ್ಬಂದಿಗಳನ್ನು ತುಂಬಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಇ) ಈ ಸಿಬ್ಬಂದಿಗಳನ್ನು ಎಷ್ಟು ದಿವಸಗಳಲ್ಲಿ ತುಂಬಲಾಗುವುದು?

ಉತ್ತರ

ಅ) ಅನುಬಂಧ ಲಗತ್ತಿಸಿದೆ.

ಆ) ತಾಲ್ಲೂಕು ಪಂಚಾಯಿತಿಗಳಲ್ಲಿ ಸಿಬ್ಬಂದಿ ಕೊರತೆಯಿಂದಾಗಿ ಕಾರ್ಯ ನಿರ್ವಹಣೆಗೆ ಅನಾನುಕೂಲತೆ ಉಂಟಾಗಿರುವ ಸಮಸ್ಯೆ ಕೆಲವು ತಾಲ್ಲೂಕು ಪಂಚಾಯಿತಿಗಳಲ್ಲಿ ಮಾತ್ರ ಇದ್ದು, ಕಾರ್ಯ ನಿರ್ವಹಣೆಗೆ ಅನಾನುಕೂಲತೆ ಉಂಟಾಗಿರುವುದನ್ನು ಪರಿಹರಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಗೆ ಸಂಬಂಧಿಸಿದಂತೆ ತಾಲ್ಲೂಕು ಪಂಚಾಯಿತಿಗಳಲ್ಲಿನ ಖಾಲಿ ಹುದ್ದೆಗಳನ್ನು, ಅನ್ಯ ಇಲಾಖೆಗಳ ಸಿಬ್ಬಂದಿಯನ್ನು ನಿಯೋಜನೆ ಮೇರೆಗೆ ಪಡೆದು ನೇಮಿಸುವ ಮೂಲಕ ತುಂಬಲು ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಇ) ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಪರಿಷ್ಕರಿಸುವ ಪ್ರಕ್ರಿಯೆ ನಡೆಯುತ್ತಿದೆ. ಪ್ರಕ್ರಿಯೆ ಮುಗಿದ ಕೂಡಲೇ ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಜರುಗಿಸಲಾಗುವುದು.

ಶ್ರೀ ಹೆಚ್.ಸಿ.ಬಸವರಾಜು (ಪಿರಿಯಾಪಟ್ಟಣ) ವಿಧಾನಸಭಾ ಸದಸ್ಯರ ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ: 155ರ 'ಅ' ಪ್ರಶ್ನೆಗೆ ಸಂಬಂಧಿಸಿದಂತೆ ಅನುಬಂಧ

ಕ್ರ.ಸಂ.	ಜಿಲ್ಲೆಯ ಹೆಸರು	ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ
೧.	ಬೆಂಗಳೂರು(ನಗರ) ಜಿಲ್ಲೆ	೭೨
೨.	ಬೆಂಗಳೂರು(ಗ್ರಾ) ಜಿಲ್ಲೆ	೩೫೬
೩.	ಚಿತ್ರದುರ್ಗ	೯೯
೪.	ತುಮಕೂರು	೪೭೧
೫.	ದಾವಣಗೆರೆ	೧೦೪
೬.	ಕೋಲಾರ	೧೪೧
೭.	ಶಿವಮೊಗ್ಗ	೧೨೧
೮.	ಮೈಸೂರು	೩೨೪
೯.	ಚಾಮರಾಜನಗರ	೧೪೯
೧೦.	ಮಂಡ್ಯ	೩೪೬
೧೧	ಕೊಡಗು	೩೦
೧೨.	ಹಾಸನ	೨೦೭
೧೩.	ಚಿಕ್ಕಮಗಳೂರು	೩೫೫
೧೪.	ದಕ್ಷಿಣ ಕನ್ನಡ	೩೩೬
೧೫.	ಉಡುಪಿ	೩೦
೧೬.	ಬೆಳಗಾಂ	೨೧೦
೧೭.	ಬಾಗಲಕೋಟೆ	೨೯೧

೧೮.	ಬಿಜಾಪುರ	೧೫೯
೧೯.	ಧಾರವಾಡ	೯೪
೨೦.	ಗದಗ್	೨೦೭
೨೧.	ಹಾವೇರಿ	೩೧೦
೨೨.	ಉತ್ತರ ಕನ್ನಡ	೩೬೫
೨೩.	ಗುಲ್ಬರ್ಗಾ	೨೦೭
೨೪.	ಬಳ್ಳಾರಿ	೧೦೪
೨೫.	ಬೀದರ್	೭೬
೨೬.	ಕೊಪ್ಪಳ	೨೧೦
೨೭.	ರಾಯಚೂರು	೨೪೮